HE

LMV - Advance Module

# ಸುರಕ್ಷಿತ ವಾಹನ ಚಾಲನೆ

## ಪ್ರಾಥಮಿಕ ವಾಹನ ಚಾಲನೆಯ ಕೈಪಿಡಿ ಮತ್ತು ರಸ್ತೆಯ ನಿಯಮಗಳು



# ಸುರಕ್ಷಿತ ವಾಹನ ಚಾಲನೆ

ಪ್ರಾಥಮಿಕ ವಾಹನ ಚಾಲನೆಯ ಕೈಪಿಡಿ ಮತ್ತು ರಸ್ತೆಯ ನಿಯಮಗಳು

# ಮುನ್ನುಡಿ

ಭಾರತದ ತ್ವರಿತಗತಿಯ ಅಭಿವೃದ್ಧಿಯ ಜೊತೆಯಲ್ಲಿಯೇ ಅನೇಕ ಸಮಸ್ಯೆಗಳು ಎದುರಾಗುತ್ತಿವೆ. ರಸ್ತೆಯಲ್ಲಿ ವಾಹನಗಳ ಹೆಚ್ಚಳ, ಜೊತೆಯಲ್ಲಿಯೇ ವಾಹನ ಚಲಿಸುತ್ತಿರುವಾಗಲೇ ಮೊಬೈಲ್ ಫೋನ್‌ನಿಂದ ಮಾತುಕತೆ, ಅಲ್ಲೇ ಕುಡಿತ ಮತ್ತು ಧೂಮಪಾನ ಇವೆಲ್ಲ ಆಸ್ತಿಪಾಸ್ತಿ ಹಾಗೂ ಜೀವಕ್ಕೆ ಹಾನಿಕರ ಎನ್ನುವುದನ್ನು ತೋರಿಸಿಕೊಟ್ಟಿವೆ.

ಅಡ್ಡಾದಿಡ್ಡಿ ವಾಹನ ಚಾಲನೆಯಿಂದ ಉಂಟಾಗುವ ಅಪಘಾತಗಳಲ್ಲಿ ಸಾವಿನ ಮತ್ತು ಗಾಯದ ಪ್ರಸಂಗಗಳ ಸುದ್ದಿಗಳಿಗಂತೂ ಮಿತಿಯೇ ಇಲ್ಲದಂತಾಗಿದೆ. ನಾವು ಜಾಗೂರಕರಾಗಿರಬೇಕು ಹಾಗೂ ಅಪಘಾತದ ಅಂಕಿಸಂಖ್ಯೆಗಳಲ್ಲಿ ಒಂದು ಭಾಗವಾಗುವ ಪರಿಸ್ಥಿತಿ ನಮಗುಂಟಾಗದಂತೆ ನೋಡಿಕೊಳ್ಳಬೇಕು.

ಇತರ ರಸ್ತೆ ಬಳಕೆದಾರರನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುವ, ರಸ್ತೆ ನಿಯಮಗಳನ್ನು ಗೌರವಿಸುವ ಮತ್ತು ರಸ್ತೆಯನ್ನು ಜವಾಬ್ದಾರಿಯಿಂದ ಉಪಯೋಗಿಸುವ ಸುಶಿಕ್ಷಿತ ಮತ್ತು ತಿಳುವಳಿಕೆ ಹೊಂದಿರುವ ಡ್ರೈವರ್‌ಗಳ ಸಂಸ್ಕೃತಿಯನ್ನು ನಿರ್ಮಿಸಿದಲ್ಲಿ ಮಾತ್ರ ಪ್ರತಿದಿನವೂ ಆಗುತ್ತಿರುವ ಈ ತರಹದ ಹಾನಿ ಮತ್ತು ಅನವಶ್ಯಕ ಸಾವುಗಳನ್ನು ಕಡಿಮೆ ಮಾಡಬಹುದು. ನಾವು ಪ್ರತಿಯೊಬ್ಬರೂ ವೈಯಕ್ತಿಕವಾಗಿ ಮತ್ತು ಒಟ್ಟಾಗಿ ಈ ಹೊಣೆಗಾರಿಕೆಯನ್ನು ಹೊತ್ತಲ್ಲಿ ನಮ್ಮ ರಸ್ತೆಗಳ ಸ್ಥಿತಿಯನ್ನು ಅಂತೆಯೇ ರಸ್ತೆ ಬಳಕೆದಾರರ ಸ್ವಭಾವವನ್ನು ಸುಧಾರಿಸಬಹುದು.


Language: Kannada

ಪ್ರಕಾಶಕರು: **ಹ್ಯೂಬರ್ಟ್ ಎಬ್ನರ್(ಇಂಡಿಯಾ) ಪ್ರೈ.ಲಿ.**
**ಸಿ 18, ಚಿರಾಗ್ ಎನ್‌ಕ್ಲೇವ್**
**ನವದೆಹಲಿ 110048**
**ಫೋನ್: +91 11 46107654**
**ಇ-ಮೇಲ್**:driving@he-india.com
**ವೆಬ್**: www.he-india.com


© **ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.**



ಮೊದಲ ಮುದ್ರಣ: ಸೆಪ್ಟೆಂಬರ್ 2009



ಈ ಮುದ್ರಣದ ಯಾವುದೇ ಭಾಗವನ್ನು ಮುದ್ರಕರ ಪೂರ್ವಾನುಮತಿಯಿಲ್ಲದೇ ಯಾವುದೇ ರೂಪದಲ್ಲಿ ಅಥವಾ ಎಲೆಕ್ಟ್ರಾನಿಕ್, ಮೆಕ್ಯಾನಿಕಲ್, ಝೆರಾಕ್ಸ್, ರೆಕಾರ್ಡಿಂಗ್‌ಗಳಂತಹ ಯಾವುದೇ ಸಾಧನದ ಮೂಲಕ-ಮರುಮುದ್ರಣ ಮಾಡುವುದಾಗಲೀ, ಸಂಗ್ರಹಿಸಿಡುವುದಾಗಲೀ, ಹಸ್ತಾಂತರಿಸುವುದಾಗಲೀ ಮಾಡುವಂತಿಲ್ಲ. ಸಾರ್ವಜನಿಕ ಎರವಲು ಕೊಡುವುದನ್ನು ನಿಷೇಧಿಸಿದೆ.

# ಪರಿವಿಡಿ




■ **LMV - ಬೇಸಿಕ್** 1–24

**ಜವಾಬ್ದಾರಿಯುತ ವಾಹನ ಚಾಲಕ** 1–10

ಚಾಲಕನ ಜವಾಬ್ದಾರಿಗಳು 1
ಅಗತ್ಯ ದಾಖಲೆಗಳು 1
ವಾಹನ ಚಾಲನೆ ಪರವಾನಗಿ 2
ಮೋಟಾರು ವಾಹನ ನೋಂದಣಿ 2
ಭಾರ ಹೇರುವುದು ಮತ್ತು ವಾಹನ ಏರುವುದು 4
ವಾಹನ ಹಾಗೂ ಪ್ರಯಾಣಿಕರ ಸುರಕ್ಷತೆ 5
ಸಾಮಾಜಿಕ ಜವಾಬ್ದಾರಿ 6
ಒಳ್ಳೆಯ ಚಾಲಕನ ಗುಣಗಳು 6
ಆರೋಗ್ಯ ಮತ್ತು ದೈಹಿಕ ಕ್ಷಮತೆ 7
ತಿಳುವಳಿಕೆ, ತರಬೇತಿ, ಕೌಶಲ ಮತ್ತು ಅನುಭವ 9
ಸಂಚಾರ ನಿಯಮ ಉಲ್ಲಂಘನೆ ಮತ್ತು ದಂಡಗಳು 10

**ವಾಹನದ ತಿಳುವಳಿಕೆ ಮತ್ತು ನಿರ್ವಹಣೆಯ ಅವಶ್ಯಕತೆ** 11–14

ವಾಹನವನ್ನು ಸುಸ್ಥಿತಿಯಲ್ಲಿಡುವುದು 11

**ವಾಹನ ಕೆಟ್ಟು ನಿಲ್ಲುವುದು/ಅಪಘಾತ/ಹಿಂಗಾಡಿ ಎಳೆಯುವುದು** 15–18

ವಾಹನ ಕೆಟ್ಟುನಿಲ್ಲುವುದು 15
ಅಪಘಾತ 16
ಹಿಂಗಾಡಿ ಎಳೆಯುವುದು 17

**ಪ್ರಥಮ ಚಿಕಿತ್ಸೆ** 19–24

ರಸ್ತೆ ಅಪಘಾತದ ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ 19
ತಲೆಗೆ ಪೆಟ್ಟಾಗುವುದು 19
ಕುತ್ತಿಗೆ ಮತ್ತು ಬೆನ್ನುಮೂಳೆಗೆ ಪೆಟ್ಟುಬೀಳುವುದು 20
ಎದೆಗೆ ಪೆಟ್ಟುಬಿದ್ದಿರುವ ಲಕ್ಷಣಗಳು 21
ಮೂಳೆ ಮುರಿತದ ಲಕ್ಷಣಗಳು 21
ಹೊರಗಾಯ, ಚುಚ್ಚುಗಾಯ, ಕೊಯ್ದುಹೋಗುವುದು ಹಾಗೂ ಜಜ್ಜಿಹೋಗುವುದು 22
ಸುಟ್ಟಗಾಯಗಳು 23



■ **LMV - 1** 25–48

**ವಾಹನ ಚಲನಶಾಸ್ತ್ರ** 27–30

ಗುರುತ್ವಾಕರ್ಷಣೆ 27
ಚಲನ ಶಕ್ತಿ 27
ವಾಹನದ ವೇಗ 28
ವಾಹನದ ಆಕಾರ 28
ರಸ್ತೆ ಮೇಲ್ಮೈಯೊಂದಿಗೆ ಟೈರ್‌ಗಳ ಕರ್ಷಣ 28
ರಸ್ತೆ ಸ್ಥಿತಿ 29
ರಸ್ತೆ ವಿನ್ಯಾಸ ಮತ್ತು ನಿರ್ಮಾಣ 29
ಭಾರ ಅಥವಾ ಸರಕು 30
ಬ್ರೇಕಿಂಗ್ ವ್ಯವಸ್ಥೆ 30

**ಕಷ್ಟದ ಪರಿಸ್ಥಿತಿಯಲ್ಲಿ ವಾಹನ ಚಾಲನೆ** 31–38

ರಸ್ತೆ ಪರಿಸ್ಥಿತಿಗಳು 31
ವ್ಯತಿರಿಕ್ತ ಹವಾಮಾನ ಪರಿಸ್ಥಿತಿಗಳು 33

# ಪರಿವಿಡಿ


**ಅಪಾಯದ ಗ್ರಹಿಕೆ** **39–44**

ಅಪಾಯದ ಗ್ರಹಿಕೆ 39

ಗಾಡಿ ನಿಧಾನಗೊಳಿಸುವುದು ಮತ್ತು ಬ್ರೇಕ್ ನಿರ್ವಹಣೆ 42

ದರ್ಶಕತೆ 43

**ವಾಹನದ ತುರ್ತುಸಂದರ್ಭಗಳು** **45–48**

ಟೈರ್ ಸಿಡಿಯುವುದು/ಸ್ಫೋಟಗೊಳ್ಳುವುದು 45

ಬ್ರೇಕ್ ವೈಫಲ್ಯ 46

ಬಾನೆಟ್ ಹಾರಿಹೋಗುವುದು 46

ಕ್ರಮ ಕೈಬಿಡುವುದು 46

ವಾಹನಕ್ಕೆ ಬೆಂಕಿ ಹೊತ್ತಿದಾಗ 46

ಜಾರುವಿಕೆ 47

ಅಸುರಕ್ಷಿತ ಅಂತರದಿಂದ ಹಿಂಬಾಲಿಸಲ್ಪಡುವುದು (ಟೇಲ್‌ಗೇಟಿಂಗ್) 48





## LMV - 2 **49–68**

**ವಾಹನ ತಂತ್ರಜ್ಞಾನ ಮತ್ತು ನಿರ್ವಹಣೆ** **51–68**

ಸಾಮಾನ್ಯ 51

ಮೋಟಾರು ವಾಹನದ ಭಾಗಗಳು 51

ಮೋಟಾರ್ ವಾಹನದ ವಿವಿಧ ವ್ಯವಸ್ಥೆಗಳು 51

ವಾಹನ ಚಾಲನೆ ನಿಯಂತ್ರಣಗಳು 55

ಮೋಟಾರು ವಾಹನಗಳ ಪರೀಕ್ಷೆ 60

ರಕ್ಷಣಾತ್ಮಕ ದೃಷ್ಟಿಯಿಂದ ವಾಹನವನ್ನು ಸುಸ್ಥಿತಿಯಲ್ಲಿಡುವುದು 63

ವಾಹನವನ್ನು ಸುಸ್ಥಿತಿಯಲ್ಲಿಡುವುದು 64

ಸಮಸ್ಯೆಗೆ ಪರಿಹಾರ 66





## LMV - 3 **69–80**

**ಷಾಫರ್‌ಗಳ ಸರಳ ಕೌಶಲಗಳು** **71–80**

ಷಾಫರ್(ಕಾರುಚಾಲಕ)ಗಳ ಪಾತ್ರ 71

ಕಾನೂನು ಮುಖಗಳು 71

ಗ್ರಾಹಕರ ಜೊತೆ ಸಂಬಂಧ 72

ವಾಹನವನ್ನು ಸುಸ್ಥಿತಿಯಲ್ಲಿಡುವುದು ಮತ್ತು ಸ್ವಚ್ಛತೆ 74


ಸಾರಿಗೆ ಬಾಧ್ಯತೆ 75

ಹೊರ ವ್ಯಕ್ತಿತ್ವ 75

ವಿಶೇಷ ಪ್ರಯಾಣಿಕರನ್ನು ನೋಡಿಕೊಳ್ಳುವುದು (ವಿಶೇಷ ವ್ಯಕ್ತಿಗಳು, ಮಕ್ಕಳು, ವಯಸ್ಸಾದವರು, ಅಂಗವಿಕಲರು) 77

ಸಮಸ್ಯಾ ಸಂದರ್ಭಗಳು 78

ಅಪಘಾತಗಳು ಮತ್ತು ವಾಹನ ಕೆಟ್ಟುಹೋಗುವುದು 79



ಸುರಕ್ಷಿತವಾಗಿ ವಾಹನ ಚಾಲನೆ ಮಾಡುವುದು ಒಂದು ಕೌಶಲವಾಗಿದ್ದು, ಅದಕ್ಕೆ ಉತ್ತಮ ತರಬೇತಿ ಬೇಕಾಗುತ್ತದೆ ಹಾಗೂ ಅದರಲ್ಲಿ ದೊಡ್ಡ ಜವಾಬ್ದಾರಿಯೂ ಇದೆ. ವಾಹನದ ಭದ್ರತೆ, ಪ್ರಯಾಣಿಕರು ಮತ್ತು ಸಾಮಾನುಗಳಿಗೆ ಸಂಬಂಧಿಸಿದ ಜವಾಬ್ದಾರಿಗಳು, ಆಡಳಿತಾತ್ಮಕ ಮತ್ತು ಸಾಮಾಜಿಕ ಜವಾಬ್ದಾರಿಗಳೂ ಇರುತ್ತವೆ. ಮೋಟಾರು ವಾಹನವೊಂದನ್ನು ಚಾಲನೆ ಮಾಡಲು ನೀವು ಅಧಿಕೃತ ಚಾಲನಾ ಪರವಾನಗಿ ಪಡೆದಿರಬೇಕು. ನೋಂದಾಯಿತ ಹಾಗೂ ವಿಮೆ ಮಾಡಿಸಿದ ರಸ್ತೆಗೆ ಅರ್ಹವಾದ ವಾಹನವನ್ನು ಹೊಂದಿರತಕ್ಕದ್ದು.

ಒಳ್ಳೆಯ ವಾಹನ ಚಾಲಕ ಉತ್ತಮ ಆರೋಗ್ಯ, ಧನಾತ್ಮಕ ಗುಣಗಳು ಮತ್ತು ರಸ್ತೆಯಲ್ಲಿ ಹೋಗುವವರ ಬಗ್ಗೆ ಧನಾತ್ಮಕ ನಡವಳಿಕೆಗಳನ್ನು ಹೊಂದಿದ್ದು ರಸ್ತೆಯ ಮೇಲೆ ರಕ್ಷಣಾತ್ಮಕ ವಾಹನ ಚಾಲನೆ ಮಾಡಬೇಕು. ದೈಹಿಕವಾಗಿ ಸಮರ್ಥನಾಗಿರುವುದು ವಾಹನ ಚಾಲಕನ ನೈತಿಕ ಜವಾಬ್ದಾರಿ. ಸುರಕ್ಷಿತ ಚಾಲನಾ ಸಾಮರ್ಥ್ಯ ಮತ್ತು ದೃಢತೆಗೆ ತೊಡಕು ಉಂಟುಮಾಡಬಲ್ಲ ಅಂಶಗಳು ಹಾಗೂ ಸ್ಥಿತಿಗಳ ಬಗ್ಗೆ ಆತ ತಿಳುವಳಿಕೆ ಹೊಂದಿರಬೇಕು.

## » ಚಾಲಕನ ಜವಾಬ್ದಾರಿಗಳು

ಈ ಕೆಳಗಿನ ವಿಷಯಗಳು ಚಾಲಕನ ಜವಾಬ್ದಾರಿ:

- ತಾನು ವಾಹನ ಚಾಲನೆ ಮಾಡುವ ರೀತಿಯ ವಾಹನಕ್ಕೆ ಬೇಕಾದ ಅಧಿಕೃತವಾದ ವಾಹನ ಚಾಲನೆ ಪರವಾನಗಿ ಹೊಂದಿರುವುದು.
- ಎಲ್ಲ ವೇಳೆಯಲ್ಲೂ ಬೇಕಾದ ದಾಖಲೆಗಳು, ಪ್ರಥಮ ಚಿಕಿತ್ಸೆಯ ಸಾಧನ, ಎಚ್ಚರಿಕೆಯ ತ್ರಿಕೋನ ಮತ್ತು ಸಂಪೂರ್ಣ ಸಜ್ಜಾಗಿರುವ ಸಾಧನಗಳ ಕಿಟ್, ಹೆಚ್ಚಿನ ಚಕ್ರ ಮತ್ತು ಜಾಕ್ ಇಟ್ಟುಕೊಂಡಿರಬೇಕು.
- ವಾಹನ ಸಾಮರ್ಥ್ಯ–ವಾಹನ ರಸ್ತೆಯಲ್ಲಿ ತೊಂದರೆ ಇಲ್ಲದೇ ಚಲಿಸುವಂತೆ ಇಟ್ಟುಕೊಳ್ಳುವುದೂ ಒಂದು ಜವಾಬ್ದಾರಿ.
- ಪ್ರಯಾಣಿಕರನ್ನು ಭದ್ರವಾಗಿ ಹಾಗೂ ಸುರಕ್ಷಿತವಾಗಿ ಕೊಂಡೊಯ್ಯುವುದು ಚಾಲಕ ಜವಾಬ್ದಾರಿ. ಆತ ಕೊಂಡೊಯ್ಯುತ್ತಿರುವ ವಸ್ತುಗಳು ಸರಿಯಾಗಿ ಭದ್ರವಾಗಿ ಇರುವಂತೆ ಮತ್ತು ವಾಹನದ ಮೇಲೆ ಅತಿರಿಕ್ತ ಭಾರ ತುಂಬದಂತೆ ನೋಡಿಕೊಳ್ಳುವುದು.
- ಜಾಗರೂಕರಾಗಿದ್ದು, ದೈಹಿಕವಾಗಿ ಸಮರ್ಥರಾಗಿರಬೇಕು. ಎಲ್ಲ ಸಂದರ್ಭಗಳಲ್ಲಿ ಮತ್ತು ಸ್ಥಿತಿಗತಿಗಳಲ್ಲೂ ವಾಹನ ಚಲಾಯಿಸುವಂತಿರಬೇಕು (ಸುಸ್ತಾಗಿರಬಾರದು, ಕುಡಿಯಬಾರದು ಅಥವಾ ಬೇರೆ ಯೋಚನೆ ಮಾಡುತ್ತಿರಬಾರದು). ಯಾವಾಗಲೂ ಸಂಚಾರ ನಿಯಮಗಳನ್ನು ಅನುಸರಿಸಬೇಕು ಮತ್ತು ಪಾಲಿಸಬೇಕು.
- ವಾಹನದಲ್ಲಿ ಸರಿಯಾದ ಮತ್ತು ಆರಾಮವಾದ ರೀತಿಯಲ್ಲಿ ಕುಳಿತುಕೊಳ್ಳುವುದು. ಇದರಿಂದ ವಾಹನವನ್ನು ಸರಿಯಾಗಿ ನಿಯಂತ್ರಣ ಮಾಡಬಹುದು, ಪೆಡಲ್‌ಗಳು, ಸ್ಟೀರಿಂಗ್‌ಗಳನ್ನು ಆರಾಮವಾಗಿ ನಯವಾಗಿ ಮತ್ತು ತೊಂದರೆಯಿಲ್ಲದೇ ಬಳಸಬಹುದು.
- ಯಾವಾಗಲೂ ಸೀಟ್‌ಬೆಲ್ಟ್ ಉಪಯೋಗಿಸುವುದು.
- ರಸ್ತೆ ಮತ್ತು ರಸ್ತೆಯ ಮೇಲಿನ ವಾಹನಗಳು ಸರಿಯಾಗಿ ಮತ್ತು ಚೆನ್ನಾಗಿ ಕಾಣಿಸುತ್ತವೆ ಎಂಬುದನ್ನು ಖಾತರಿ ಮಾಡಿಕೊಳ್ಳಬೇಕು. ವಿಂಡ್‌ಸ್ಕ್ರೀನ್ ಸ್ವಚ್ಛವಾಗಿಡಿ ಮತ್ತು ಕನ್ನಡಿಗಳನ್ನು ಸೂಕ್ತವಾಗಿ ಅಡ್ಜಸ್ಟ್ ಮಾಡಿ.
- ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ನಿಮ್ಮ ವಾಹನವನ್ನು ಬಳಸುವುದು. ಹಠಾತ್ತಾಗಿ ವಾಹನದ ವೇಗೋತ್ಕರ್ಷ ಹೆಚ್ಚು ಮಾಡಬಾರದು ಮತ್ತು ಹಠಾತ್ತಾಗಿ ಬ್ರೇಕ್ ಹಾಕಬಾರದು. ನಿಲುಗಡೆ ಲೈಟ್ ಇದ್ದಾಗ ಸ್ವಿಚ್ ಆಫ್ ಮಾಡುವುದು ಮತ್ತು ನಯವಾಗಿ ವಾಹನ ಚಾಲನೆ ಮಾಡುವ ಮೂಲಕ ಪರಿಸರಕ್ಕೆ ಹಾನಿ ಮಾಡದೇ ಇರುವುದು.

## » ಅಗತ್ಯ ದಾಖಲೆಗಳು

ಒಳ್ಳೆಯ ಚಾಲಕ ತಾನು ಚಲಾಯಿಸುವ ವಾಹನದ ಎಲ್ಲ ಅವಶ್ಯಕ ದಾಖಲೆಗಳ ಬಗ್ಗೆ ಮತ್ತು ಆತ ಒಬ್ಬ ತರಬೇತಿ ಪಡೆದಿರುವ ವಾಹನ ಚಾಲಕ ಎಂಬುದಕ್ಕೆ ಆಧಾರವಾಗಿರುವ ವೈಯಕ್ತಿಕ ದಾಖಲೆಗಳ ಬಗ್ಗೆಯೂ ತಿಳಿದುಕೊಂಡಿರಬೇಕು. ಎಲ್ಲ ದಾಖಲೆಗಳನ್ನು ನವೀಕರಿಸಿ ಇಟ್ಟುಕೊಳ್ಳುವುದು ಆತನ ಜವಾಬ್ದಾರಿ. ವಾಹನ ಚಾಲನೆ ಪ್ರಮಾಣಪತ್ರ ನವೀಕರಿಸುವುದು, ರಸ್ತೆ ತೆರಿಗೆ ಮತ್ತು ಪರವಾನಗಿಗಳನ್ನು ನವೀಕರಿಸುವುದು ಸೇರುತ್ತದೆ.

ಆತ ಸಂಚಾರ ನಿಯಮಗಳು ಮತ್ತು ವಿಧಿಗಳನ್ನು ಪೂರ್ಣವಾಗಿ ತಿಳಿದುಕೊಂಡಿರಬೇಕು.

ವಾಹನ ಚಾಲನೆ ಮಾಡುವಾಗ, ಕೆಳಗಿನ ದಾಖಲೆಗಳನ್ನು ಚಾಲಕ ಕೊಂಡೊಯ್ಯುವುದು ಕಡ್ಡಾಯವಾಗಿರುತ್ತದೆ:

- ವಾಹನ ಚಾಲನೆ ಪರವಾನಗಿ
- ವಾಹನ ನೋಂದಣಿ ಪ್ರಮಾಣಪತ್ರ
- ಅನ್ವಯಿಸುವ ರಸ್ತೆ ತೆರಿಗೆ ಪ್ರಮಾಣಪತ್ರ
- ವಿಮಾ ಪ್ರಮಾಣಪತ್ರ
- ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ
- ಅನುಮತಿ/ಪರವಾನಗಿ ಮತ್ತು ವಾಹನ ಸಮರ್ಥತೆ ಪ್ರಮಾಣಪತ್ರ (ಸಾರಿಗೆ ಮತ್ತು ವಾಣಿಜ್ಯ ವಾಹನಗಳಿಗೆ ಮಾತ್ರವೇ ಅನ್ವಯವಾಗುತ್ತದೆ.)



# ಜವಾಬ್ದಾರಿಯುತ ವಾಹನ ಚಾಲಕ

ಸಮವಸ್ತ್ರ ಧರಿಸಿರುವ ಯಾವುದೇ ಪೊಲೀಸ್ ಅಧಿಕಾರಿ ಅಥವಾ ಸಾರಿಗೆ ಇಲಾಖೆಯ ಕಾನೂನು ಜಾರಿ ಸಿಬ್ಬಂದಿ ಈ ದಾಖಲೆಗಳನ್ನು ಯಾವುದೇ ಹೊತ್ತಿನಲ್ಲೂ ಪರೀಕ್ಷೆ ಮಾಡಬಹುದು.

ದಾಖಲೆಗಳ ಗ್ಯಾಜೆಟೆಡ್ ಸರಕಾರಿ ಅಧಿಕಾರಿಯ ಸಹಿ ಮತ್ತು ಮುದ್ರೆ ಇರುವ, ದೃಢೀಕರಣ ಮಾಡಲಾಗಿರುವ ಝೆರಾಕ್ಸ್ ಪ್ರತಿಗಳನ್ನು ಮಾತ್ರವೇ ಒಪ್ಪಿಕೊಳ್ಳಲಾಗುತ್ತದೆ.

ಅಧಿಕೃತ ದಾಖಲೆಗಳನ್ನು ತೋರಿಸಲು ಆಗದೇ ಇರುವುದು ಶಿಕ್ಷೆ ಕೊಡುವಂಥ ಅಪರಾಧವಾಗಿದೆ. ವಾಹನವನ್ನು ವಶಕ್ಕೆ ತೆಗೆದುಕೊಳ್ಳಬಹುದು.

## » ವಾಹನ ಚಾಲನೆ ಪರವಾನಗಿ

ಅಧಿಕೃತವಾದ ವಾಹನ ಚಾಲನೆ ಪ್ರಮಾಣಪತ್ರ, ಅದನ್ನು ಹೊಂದಿರುವ ವ್ಯಕ್ತಿಗೆ ಕೆಳಗಿನ ರೀತಿಯ ವಾಹನಗಳಲ್ಲಿ ಒಂದು ಅಥವಾ ಹೆಚ್ಚು ಮೋಟಾರು ವಾಹನಗಳನ್ನು ವಾಹನ ಚಾಲನೆ ಮಾಡಲು ಅನುಮತಿ ಕೊಡುತ್ತದೆ:

- ಗೇರ್ ಇಲ್ಲದಿರುವ ಮೋಟಾರ್ ಸೈಕಲ್
- ಗೇರ್ ಇರುವ ಮೋಟಾರ್ ಸೈಕಲ್
- ತ್ರಿಚಕ್ರವಾಹನ
- ಹಗುರ ಮೋಟಾರು ವಾಹನ (ಖಾಸಗಿ/ವಾಣಿಜ್ಯ)
- ಸಾರಿಗೆ ವಾಹನ (ಸರಕು ಸಾಗಿಸುವ ವಾಹನ/ಪ್ರಯಾಣಿಕ ವಾಹನ)
- ನಮೂದಿಸಿದ ರೀತಿಯ ಮೋಟಾರು ವಾಹನ

### ವಾಹನ ಚಾಲನೆ ಪರವಾನಗಿ ವಾಯಿದೆ

ಪರವಾನಗಿಗೆ ಕೊಡಮಾಡಿದ ದಿನದಿಂದ 20 ವರ್ಷಗಳ ಕಾಲ ಅಥವಾ ನೀವು 50 ವರ್ಷಗಳಿಗೆ ತಲುಪುವವರೆಗೆ–ಇವೆರಡರಲ್ಲಿ ಯಾವುದು ಮೊದಲು ಬರುತ್ತದೋ ಅಲ್ಲಿಯವರೆಗೂ ಪರವಾನಗಿ ವಾಯಿದೆ ಇರುತ್ತದೆ. 50 ವರ್ಷಗಳ ನಂತರ ವಾಯಿದೆ 5 ವರ್ಷಗಳು.

ನಿಮ್ಮ ಪರವಾನಗಿ ವಾಣಿಜ್ಯ ಪ್ರಯಾಣಿಕ ವಾಹನ ಅಥವಾ ಸರಕು ಸಾಗಾಣಿಕೆ ವಾಹನಗಳಿಗೆ ಆಗಿದ್ದರೆ, ಅದು ಪ್ರತೀ 3 ವರ್ಷಗಳಿಗೊಮ್ಮೆ ಅಥವಾ ಪರವಾನಗಿ ನೀಡುವ ಅಧಿಕಾರಿಗಳು ಸೂಚಿಸಿರುವ ರೀತಿಯಲ್ಲಿ ನವೀಕರಣಗೊಳ್ಳಬೇಕು.

### ವಾಹನ ಚಾಲನೆ ಪರವಾನಗಿ ನವೀಕರಿಸುವುದು

ವಾಹನ ಚಾಲನೆ ಪರವಾನಗಿ ನವೀಕರಿಸುವುದು ನಿಮ್ಮ ವಯಸ್ಸನ್ನು ಅವಲಂಬಿಸಿರುತ್ತದೆ. ನೀವು 30 ವರ್ಷ ವಯಸ್ಸಿನವರಾಗಿದ್ದರೆ, 50 ವರ್ಷಗಳ ವರೆಗೂ ನಿಮ್ಮ ಪರವಾನಗಿ ವಾಯಿದೆ ಇರುತ್ತದೆ. ನೀವು 45 ಅಥವಾ ಇನ್ನೂ ಹೆಚ್ಚಿನ ವಯಸ್ಸಿನವರಾದರೆ, ಒಮ್ಮೆಗೆ 5 ವರ್ಷಗಳ ಅವಧಿಗೆ ನವೀಕರಣವಾಗುತ್ತದೆ.

ವಾಹನ ಚಾಲನೆ ಪರವಾನಗಿಯ ವಾಯಿದೆ ಮುಕ್ತಾಯವಾಗುವ ದಕ್ಕಿಂತ 30 ದಿನಗಳ ಒಳಗಾಗಿ ನೀವು ನಿಮ್ಮ ವಾಹನ ಚಾಲನೆ ಪರವಾನಗಿ ನವೀಕರಣ ಮಾಡಿಸಬೇಕು. ಪರವಾನಗಿ ವಾಯಿದೆ ಮುಕ್ತಾಯವಾದ 30 ದಿನಗಳ ನಂತರವೂ ವಾಹನ ಚಾಲನೆ ಮಾಡುವುದು ಅಪರಾಧ.

**ಅಗತ್ಯಗಳು**

- ನಮೂನೆ ಸಂಖ್ಯೆ 9ರಲ್ಲಿ ಅರ್ಜಿ
- ವಯಸ್ಸು ಮತ್ತು ಮನೆಯ ವಿಳಾಸದ ಪ್ರಮಾಣಪತ್ರ
- ಅಗತ್ಯವಿದ್ದಾಗ ವೈದ್ಯಕೀಯ ಪ್ರಮಾಣಪತ್ರ
- ನಿಮ್ಮ ಸದ್ಯದ ವಾಹನ ಚಾಲನೆ ಪರವಾನಗಿ
- ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರದ ಮೂರು ಕಾಪಿಗಳು

### ಕಳೆದುಹೋದ ಪರವಾನಗಿ ಪತ್ರ

ಪರವಾನಗಿ ಕಳೆದುಹೋದರೆ, ಕಳೆದುಹೋಗಿದೆ ಎಂದು ತಕ್ಷಣವೇ ತಿಳಿಸಬೇಕು. ಪರವಾನಗಿಯ ಬೇರೊಂದು ಪ್ರತಿಯನ್ನು ಪಡೆದುಕೊಳ್ಳಲು ಈ ಕೆಳಗಿನ ವಿಧಾನವನ್ನು ಅನುಸರಿಸಬೇಕು:

- ಪರವಾನಗಿ ಕಳೆದುಹೋಗಿರುವುದರ ಬಗ್ಗೆ ಎಲ್ಲ ವಿವರಗಳನ್ನೂ ಬರೆದಿರುವ ವರದಿಯೊಂದನ್ನು ಪೊಲೀಸ್ ಠಾಣೆಗಳಲ್ಲಿ ಕೊಡಿ.
- ವಾಣಿಜ್ಯ ಪರವಾನಗಿ ಆಗಿದ್ದರೆ ಸಂಚಾರ ಪೊಲೀಸರಿಂದ ಚಲನ್ ಕ್ಲಿಯರೆನ್ಸ್ ವರದಿಯನ್ನು ಪಡೆಯಿರಿ.
- ನಮೂನೆ 6ರಲ್ಲಿ ಅರ್ಜಿ ಕೊಡಿ.
- ನಿಮ್ಮ ಕಳೆದುಹೋಗಿರುವ ಪರವಾನಗಿಯ ಪ್ರತಿಯೊಂದನ್ನು ಲಗತ್ತಿಸಿ.
- ವಯಸ್ಸು ಮತ್ತು ವಾಸ ಮಾಡುವ ವಿಳಾಸದ ಪ್ರಮಾಣಪತ್ರ
- ಅನ್ವಯವಾಗುವ ಶುಲ್ಕ

ನಿಮ್ಮದೇ ಅನುಕೂಲಕ್ಕಾಗಿ, ಯಾವಾಗಲೂ ವಾಹನ ಚಾಲನೆ ಪರವಾನಗಿಯ ಝೆರಾಕ್ಸ್ ಕಾಪಿಯನ್ನು ಅಥವಾ ಸಂಖ್ಯೆಯ ದಾಖಲೆಗಳನ್ನು, ಮತ್ತು ಯಾವ ಕಚೇರಿಯಿಂದ ನಿಮ್ಮ ಪರವಾನಗಿ ನೀಡಲಾಗಿದೆ ಎಂಬುದನ್ನು ಇಟ್ಟುಕೊಂಡಿರಿ.

## » ಮೋಟಾರು ವಾಹನ ನೋಂದಣಿ

### ನೋಂದಣಿ ಸಂಖ್ಯೆ

ವಾಹನವೊಂದನ್ನು ನೋಂದಣಿ ಮಾಡದೇ ಇದ್ದರೆ ಮತ್ತು ಅದಕ್ಕೆ ನೋಂದಣಿ ಸಂಖ್ಯೆ ಇಲ್ಲದೇ ಇದ್ದರೆ ಅದನ್ನು ಚಾಲನೆ ಮಾಡುವಂತಿಲ್ಲ.



ಸಾರಿಗೆ ಅಧಿಕಾರಿಗಳು ನೀಡಿರುವ ಸಂಖ್ಯೆಯನ್ನು

- ಮೋಟಾರು ವಾಹನದ ಮುಂದೆ ಹಾಗೂ ಹಿಂದೆ ಪ್ರದರ್ಶಿಸಿರಬೇಕು.
- ಅದು ಶಿಫಾರಸು ಮಾಡಿರುವ ಗಾತ್ರದಲ್ಲಿರಬೇಕು ಮತ್ತು ಸಾಮಾನ್ಯ ದೂರದಿಂದಲೂ ಕಾಣಿಸುವಂತಿರಬೇಕು.

ಬೇರೆ ಬೇರೆ ರೀತಿಯ ವಿನ್ಯಾಸಗಳಿರುವ ಅಕ್ಷರಗಳನ್ನು ಬಳಕೆ ಮಾಡುವುದು ಕಾನೂನಿಗೆ ವಿರುದ್ಧವಾಗಿದೆ ಮತ್ತು ಶಿಕ್ಷೆ ನೀಡುವಂಥ ಅಪರಾಧವಾಗಿದೆ!


**"ಅರ್ಜಿ ಸಲ್ಲಿಸಲಾಗಿದೆ"** ಎಂಬ ನಂಬರ್ ಪ್ಲೇಟಿನೊಂದಿಗೆ ಗಾಡಿ ನಡೆಸಬಾರದು.

ಅಕ್ಷರಗಳ ಗಾತ್ರ, ಸಂಖ್ಯೆಗಳು ಹಾಗೂ ನಂಬರ್ ಪ್ಲೇಟಿನ ಬಣ್ಣ ಹೀಗಿರಬೇಕು ಎಂಬುದು ಕೂಡ ಕಾನೂನಿನಲ್ಲಿ ತಿಳಿಸಲ್ಪಟ್ಟಿದೆ.

ನಿಮ್ಮ ಮೇಲೆ ಪ್ರಕರಣ ಆಗದಂತೆ ಅಥವಾ ಅಧಿಕಾರಿಗಳು ನಿಮ್ಮ ವಿರುದ್ಧ ಕಾನೂನು ಕ್ರಮ ಜಾರಿ ಮಾಡದಂತೆ ನೋಡಿಕೊಳ್ಳಲು ನಿಯಮಗಳನ್ನು ನೀವು ಪಾಲಿಸುವುದು ಕಡ್ಡಾಯವಾಗಿರುತ್ತದೆ.

## "ಮಾಲಿನ್ಯ ನಿಯಂತ್ರಣದಲ್ಲಿದೆ" ಪ್ರಮಾಣಪತ್ರ

ನಿಮ್ಮ ವಾಹನವು ಅಧಿಕೃತವಾದ **"ಮಾಲಿನ್ಯ ನಿಯಂತ್ರಣ"** ಪ್ರಮಾಣಪತ್ರ ಹೊಂದಿರಬೇಕು. ಹೆಚ್ಚಿನ ರಾಜ್ಯಗಳು ಬೇರೆ ಬೇರೆ ರೀತಿಯ ಅವಶ್ಯಕತೆಗಳನ್ನು ಹೊಂದಿವೆ. ಇದು ವಾಹನದ ವಿಧ ಮತ್ತು ವಯಸ್ಸು ಅನುಸರಿಸಿ ಬೇರೆಬೇರೆಯಾಗಿರುತ್ತದೆ.




ಅವಶ್ಯಕತೆಗಳ ಬಗ್ಗೆ ಎಚ್ಚರಿಕೆ ವಹಿಸುವುದು ಮತ್ತು ರಾಜ್ಯದ ನಿಯಮಗಳು ಹಾಗೂ ವಿಧಿಗಳನ್ನು ಪಾಲಿಸುವುದು ಮಹತ್ವದ್ದಾಗಿದೆ.

## ವಾಹನದ ಅರ್ಹತೆ ಪ್ರಮಾಣಪತ್ರ

ಸುರಕ್ಷಿತವಾದ ಮತ್ತು ಸುಸ್ಥಿತಿಯಲ್ಲಿಟ್ಟಿರುವ ಕಾರ್‌ಗೆ ಮಾತ್ರ ರಸ್ತೆಗಳಲ್ಲಿ ಅವಕಾಶವಿದೆ. ವಾಹನಕ್ಕೆ 15 ವರ್ಷಗಳಿಗಿಂತ ಹೆಚ್ಚಿಗೆ ವಯಸ್ಸಾಗಿದ್ದರೆ, ರಸ್ತೆಯಲ್ಲಿ ಅದು ಹೋಗಬಹುದು ಎಂದು ನಿರ್ಧರಿಸಬೇಕಾದರೆ ಅದಕ್ಕೆ ಪ್ರತಿ ವರ್ಷವೂ ಸುಸ್ಥಿತಿಯ ಪರೀಕ್ಷೆ ಆಗಬೇಕಾಗುತ್ತದೆ. 15 ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿರುವ ಎಲ್ಲ ಕಾರ್‌ಗಳಿಗೂ ಈ ಪರೀಕ್ಷೆಯು ಕಡ್ಡಾಯವಾಗಿದೆ.

## ಕಾಲಾನುಸಾರ ಮತ್ತು ವಾಹನ ನಿರ್ವಹಣೆ

ರಸ್ತೆಯಲ್ಲಿ ಚಲಿಸಲು ಯೋಗ್ಯವಾದ ವಾಹನಕ್ಕೆ ಮಾತ್ರ ರಸ್ತೆಯ ಮೇಲೆ ಹೋಗುವ ಅವಕಾಶ ಇರುತ್ತದೆ. ಇದರ ಅರ್ಥ ಏನೆಂದರೆ ವಾಹನದ ಎಲ್ಲ ಮೆಕಾನಿಕಲ್ ಹಾಗೂ ಎಲೆಕ್ಟ್ರಿಕಲ್ ಭಾಗಗಳು ಚೆನ್ನಾಗಿ ಕೆಲಸ ಮಾಡುತ್ತಿರಬೇಕು ಮತ್ತು ವಾಹನವು ಉತ್ತಮವಾಗಿ ಸುಸ್ಥಿತಿಯಲ್ಲಿ ಇರಬೇಕು. ತಾನು ಚಲಾಯಿಸುವ ವಾಹನವು ಕೆಲಸ ಮಾಡುವಂಥ ಸ್ಥಿತಿಯಲ್ಲಿದೆಯೇ ಎಂಬುದನ್ನು ನೋಡುವುದು ಮತ್ತು ಅದನ್ನು ಸುರಕ್ಷಿತವಾಗಿ ಓಡುವಂಥ ಸ್ಥಿತಿಯಲ್ಲಿ ಇಡುವುದು ಚಾಲಕನ ಜವಾಬ್ದಾರಿಯಾಗಿರುತ್ತದೆ.

ವಾಹನವನ್ನು ಯಾವಾಗಲೂ ಸರಿಯಾಗಿ ಸುಸ್ಥಿತಿಯಲ್ಲಿಡಬೇಕು. ಅಂದರೆ ಅದು ಯಾವುದೇ ಸಮಯದಲ್ಲೂ ಸುರಕ್ಷಿತವಾಗಿ ಚಾಲನೆ ಮಾಡುವ ಹಾಗಿರಬೇಕು. ಚಾಲನೆಗೂ ಮೊದಲು ಗಾಡಿಯನ್ನು ಪರೀಕ್ಷಿಸುವುದು ಮತ್ತು ನಿಯಮಿತವಾಗಿ ಗಾಡಿಯನ್ನು ಪರೀಕ್ಷೆ ಮಾಡುತ್ತಿರುವುದು ಸುರಕ್ಷಿತವಾದ ವಾಹನ ಚಾಲನೆಗೆ ಮುಖ್ಯವಾಗಿರುತ್ತದೆ. ನಿಮಗೆ ಯಾವುದೇ ದೋಷ ಕಂಡುಬಂದರೆ, ಅದನ್ನು ಪರಿಹಾರಮಾಡದೇ ನಿಮ್ಮ ಪ್ರಯಾಣವನ್ನು ಪ್ರಾರಂಭಿಸಬೇಡಿ.

ವಾಹನ ಓಡಿಸುವಾಗ ಉಪಕರಣ ಪ್ಯಾನೆಲ್, ಕನ್ನಡಿಗಳು ಮತ್ತು ವಾಹನ ಹೇಗೆ ಹೋಗುತ್ತಿದೆ ಎಂಬುದರ ಮೇಲೆ ಯಾವಾಗಲೂ ಲಕ್ಷ್ಯವಿಡಿ. ನಿಮ್ಮ ವಾಹನವು ಸಹಜವಾಗಿ ಓಡುತ್ತಿಲ್ಲ ಎಂಬುದನ್ನು ಸೂಚಿಸುವಂಥ ಯಾವುದಾದರೂ ಎಚ್ಚರಿಕೆ ಲೈಟ್‌ಗಳು, ಬಜರ್‌ಗಳು, ವಾಸನೆ ಅಥವಾ ಸೂಚನೆಗಳು ಕಂಡುಬಂದರೆ, ಅಥವಾ ಹೇಳಲಾದ ಪರಿಮಾಣಗಳಲ್ಲಿ ಇಲ್ಲ ಎಂದು ಅನ್ನಿಸಿದರೆ ವಾಹನ ನಿಲ್ಲಿಸಿ. ನಂತರ ಸಮಸ್ಯೆಯನ್ನು ವಿಶ್ಲೇಷಣೆ ಮಾಡಿ.



ಸಮಸ್ಯೆಯನ್ನು ಗುರುತಿಸಲು ಅಥವಾ ಪರಿಹಾರ ಮಾಡಲು ಆಗದೇ ಇದ್ದರೆ, ವಾಹನವನ್ನು ಓಡಿಸುವುದು ಈಗಲೂ ಸುರಕ್ಷಿತವೇ ಅಥವಾ ಹತ್ತಿರದಲ್ಲಿರುವ ಗ್ಯಾರೇಜಿಗೆ ಅದನ್ನು ತೆಗೆದುಕೊಂಡು ಹೋಗಬೇಕೇ ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಿ.

ವಾಹನ ಓಡಿಸುವುದಕ್ಕೂ ಮೊದಲು ಅದನ್ನು ತಪಾಸಣೆ ಮಾಡುವುದು, ಕಾಲಕಾಲಕ್ಕೆ ವಾಹನಕ್ಕೆ ಪೆಟ್ರೋಲ್ ಹಾಕಿಸುವಾಗ ತಪಾಸಣೆ ಮಾಡುವುದು ಮತ್ತು ಸತತವಾಗಿ ಗಾಡಿಗೆ ಸರ್ವೀಸ್ ಮಾಡಿಸುವುದರಿಂದ ವಾಹನ ಚಾಲನೆ ಮಾಡುವಾಗ ಸಮಸ್ಯೆಗಳನ್ನು ಕಡಿಮೆ ಮಾಡಬಹುದು. ಇದರಿಂದ ವಾಹನ ನೋಡಿಕೊಳ್ಳಲು ಬೀಳುವ ಖರ್ಚು ಕಡಿಮೆ ಮಾಡಬಹುದು.

# ಜವಾಬ್ದಾರಿಯುತ ವಾಹನ ಚಾಲಕ

### ವಾಹನ ದುರುಪಯೋಗ

ನೀವು ವಾಹನದ ಮಾಲೀಕರಲ್ಲದೇ ಹೋದರೆ, ವಾಹನದ ದುರ್ಬಳಕೆ ಮಾಡಬೇಡಿ. ನಿಮಗೆ ನೀಡಲಾದ ಉದ್ದೇಶಕ್ಕಾಗಿ ಇದನ್ನು ಬಳಕೆ ಮಾಡಿರಿ ಮತ್ತು ಅನುಮತಿ ನೀಡಲಾದ ವ್ಯಕ್ತಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ವಾಹನ ಚಲಾಯಿಸಲು ಅವಕಾಶ ಮಾಡಿಕೊಡಬೇಡಿ.

ಅಪಘಾತವಾದರೆ, ತಕ್ಷಣವೇ ಮಾಲಿಕರಿಗೆ ತಿಳಿಸಿರಿ.

## » ಭಾರ ಹೇರುವುದು ಮತ್ತು ವಾಹನ ಏರುವುದು

ವಾಹನಕ್ಕೆ ಭಾರ ಹೇರುವುದು ಮತ್ತು ಜನರು ವಾಹನವನ್ನು ಏರುವುದು ಇವೆರಡೂ ವಾಹನದ ಸ್ಥಿರತೆ, ನಿಯಂತ್ರಣ ಹಾಗೂ ವಾಹನವನ್ನು ಓಡಿಸುವುದರ ಮೇಲೆ ಪರಿಣಾಮ ಬೀರುತ್ತವೆ. ಪ್ರತಿಯೊಂದು ವಾಹನವೂ ಇಂತಿಷ್ಟೇ ಭಾರ ಹೊರುವ ಸಾಮರ್ಥ್ಯವನ್ನು ಹಾಗೂ ಇಂತಿಷ್ಟೇ ಗರಿಷ್ಠ ಜನರನ್ನು ಕೊಂಡೊಯ್ಯುವ ಸಾಮರ್ಥ್ಯವನ್ನು ಹೊಂದಿರುತ್ತದೆ.

ಈ ಸಾಮರ್ಥ್ಯಕ್ಕೂ ಹೆಚ್ಚಿಗೆ ಭಾರ ಹೊರಿಸುವುದರಿಂದ ಅಥವಾ ಹೆಚ್ಚಿನ ಜನರು ವಾಹನವನ್ನು ಏರುವುದರಿಂದ ವಾಹನ ಹಾಳಾಗುತ್ತದೆ ಮತ್ತು ವಾಹನ ನಿಯಂತ್ರಣ ತಪ್ಪುತ್ತದೆ. ಇದು ಅಪಾಯಕಾರಿ ಸನ್ನಿವೇಶಗಳನ್ನು ಉಂಟುಮಾಡುತ್ತದೆ ಮತ್ತು ವಾಹನ ಓಡಿಸುವಾಗ ನಿಯಂತ್ರಣ ತಪ್ಪುವಂತೆಯೂ ಮಾಡುತ್ತದೆ.




### ಭಾರ ಹೇರುವುದು ಮತ್ತು ಸಾಮಾನು ಸಾಗಿಸುವುದು

- ವಾಹನದ ಮೇಲೆ ಯಾವಾಗಲೂ ಹೆಚ್ಚು ಭಾರ ಹೊರಿಸಬೇಡಿ. ಹೇಳಲಾದ ಮಿತಿಯನ್ನು ದಾಟಬೇಡಿ (ಕಿಗ್ರಾಂಗಳು/ಮೀಟರ್‌ಗಳು/ಅಗಲ/ಎತ್ತರ).
- ಸಾಗಿಸಬೇಕಾದ ಪ್ರತಿಯೊಂದು ವಸ್ತು ಅಥವಾ ಪೊಟ್ಟಣವನ್ನೂ ಸುರಕ್ಷಿತವಾಗಿರುವ ಜಾಗದಲ್ಲಿ ಇಡಬೇಕಾಗುತ್ತದೆ. ಅಗತ್ಯವಿದ್ದರೆ ಇದನ್ನು ಭದ್ರವಾಗಿ ಇಡಬೇಕು ಮತ್ತು ಹಗ್ಗ ಕಟ್ಟಿರಬೇಕು.
- ಸಡಿಲ ವಸ್ತುಗಳಾದ ಉಪಕರಣಗಳು, ಲ್ಯಾಪ್‌ಟಾಪ್, ನೀರಿನ ಬಾಟಲಿಗಳನ್ನು ಹಿಂದಿನ ಸೀಟ್ ಶೆಲ್ಫ್ ಮೇಲೆ ಅಥವಾ ಅಸುರಕ್ಷಿತವಾಗಿ ಹಿಂದಿನ ಸೀಟ್ ಮೇಲೆ ಇಡಬೇಡಿ. ನೀವು ಹಠಾತ್ ಬ್ರೇಕ್ ಹಾಕಿದರೆ, ಈ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಹಾರಾಡುತ್ತವೆ ಮತ್ತು ಅಪಾಯಕಾರಿ ಆಯುಧವಾಗಿ ಮಾರ್ಪಡುತ್ತವೆ. ನಿಮಗೂ ನಿಮ್ಮ ಇತರ ಪ್ರಯಾಣಿಕರಿಗೂ ಗಾಯ ಕೂಡ ಉಂಟುಮಾಡಬಹುದು. ಇದು ವಾಹನದ ನಿಯಂತ್ರಣ ಕಳೆದುಕೊಳ್ಳುವಂತೆ ಮಾಡಬಹುದು.
- ಭಾರವಾದ ಸಾಮಾನುಗಳನ್ನು ಕಾರ್ ಬೂಟ್ ಅಥವಾ ಡಿಕ್ಕಿ ಒಳಗೆ ಇಡಬೇಕು.




- ವಾಹನದ ಮೇಲೆ ಹೇರಿರುವ ವಸ್ತುವಿನ ಭಾರದಿಂದಾಗಿ ನಿಮ್ಮ ವಾಹನ ಚಾಲನೆಗೆ ಮುಂದಿನ ರಸ್ತೆ ಕಾಣಿಸದಂತೆ ಆಗಬಾರದು.
- ಪ್ರಯಾಣಿಕರು ಮತ್ತು ಸಾಮಾನುಗಳನ್ನು ಜೊತೆಯಲ್ಲಿ ಸಾಗಿಸುವಾಗ ಎಚ್ಚರಿಕೆಯಿಂದಿರಿ.
- ವಾಹನದ ಮೇಲಿನ ಸಾಮಾನು ಇರಿಸುವ ರ್‍ಯಾಕ್ ಬಳಕೆ ಮಾಡುವಾಗ ವಾಹನದ ಮೇಲ್ಭಾವಣಿಗೆ ಸಾಮಾನುಗಳಿಂದ ಹಾನಿ ಉಂಟಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ. ಪ್ರತಿಯೊಂದು ರ್‍ಯಾಕ್ ಕೂಡ ಸುರಕ್ಷಿತವಾಗಿ ಕೊಂಡೊಯ್ಯಬಹುದಾದ ಭಾರದ ಮಿತಿಯನ್ನು ಹೊಂದಿರುತ್ತದೆ. ಸಾಗಣೆ ಮಾಡಲಾದ ಸಾಮಾನುಗಳನ್ನು ಸಮರ್ಪಕವಾಗಿ ಭದ್ರವಾಗಿ ಇರಿಸಲಾಗಿದೆ ಎಂಬುದನ್ನು ಖಾತರಿಮಾಡಿಕೊಳ್ಳಿ ಮತ್ತು ವಾಹನ ಚಾಲನೆ ಮಾಡುವಾಗಲೇ ವಸ್ತುಗಳನ್ನು ತೆಗೆಯಲು ಪ್ರಯತ್ನಿಸಬೇಡಿ ಅಥವಾ ರಸ್ತೆ ಮೇಲೆ ಪ್ರಯಾಣಿಸುವವರಿಗೆ ಅಪಾಯ ತರಬೇಡಿ.




**ಎಚ್ಚರಿಕೆ:**
ಕಾರಿನ ಮೇಲ್ಭಾವಣಿಯ ಮೇಲೆ ಹೆಚ್ಚಿನ ಭಾರ ಹೇರುವುದು ಕಾರಿನ ಅಸಮತೋಲನಕ್ಕೆ ಕಾರಣವಾಗುತ್ತದೆ. ಇದು ಅಪಾಯಕಾರಿಯಾಗಿದ್ದು ನಿಯಂತ್ರಣ ತಪ್ಪುವಂತೆ ಮಾಡುತ್ತದೆ ಮತ್ತು ಅಪಘಾತಗಳಿಗೂ ಕಾರಣವಾಗುತ್ತದೆ. ಒಟ್ಟಾರೆ ಸೌಖ್ಯ, ಸುರಕ್ಷತೆ ಮತ್ತು ಭದ್ರತೆಗಳು ಚಾಲಕನ ಜವಾಬ್ದಾರಿಗಳಾಗಿವೆ.

### ಪ್ರಯಾಣಿಕರನ್ನು ಸಾಗಿಸುವುದು

ಪ್ರಯಾಣಿಕರ ಸುರಕ್ಷಿತ ಸಾಗಾಟಕ್ಕೆ ಚಾಲಕ ಜವಾಬ್ದಾರನಾಗಿರುತ್ತಾನೆ. ಲಭ್ಯವಿರುವ ಆಸನಗಳಿಗಿಂತ ಹೆಚ್ಚಿನ ಜನರನ್ನು, ಅಥವಾ ಕೊಂಡೊಯ್ಯಬಹುದಾದ ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರಯಾಣಿಕರನ್ನು ಕೊಂಡೊಯ್ಯಬೇಡಿ.

ವಾಹನದ ಮೇಲೆ ವಿಪರೀತ ಭಾರ ಹೇರುವುದು ಗಂಭೀರವಾದ ಅಪಘಾತಗಳಿಗೆ ಕಾರಣವಾಗುತ್ತದೆ.




ಎಲ್ಲ ಪ್ರಯಾಣಿಕರೂ ತಮ್ಮ ಸೀಟ್ ಬೆಲ್ಟ್‌ಗಳನ್ನು ಸಮರ್ಪಕವಾಗಿ ಹಾಕಿಕೊಂಡಿದ್ದಾರೆ ಎಂಬುದನ್ನು ವಾಹನದ ಚಾಲಕ ಖಾತರಿ ಮಾಡಿಕೊಳ್ಳಬೇಕು.




## ಮಕ್ಕಳ ಸಾಗಣೆ

ಅವರ ವಯಸ್ಸು ಮತ್ತು ತೂಕಕ್ಕೆ ಸಮನಾಗಿ ಸಿದ್ಧಪಡಿಸಲಾಗಿರುವ ಆಸನಗಳು ಇರುವ ವಿಶೇಷ ವಾಹನಗಳಲ್ಲಿ ಮಕ್ಕಳನ್ನು ಕೊಂಡೊಯ್ಯಬೇಕು. ಮಕ್ಕಳನ್ನು ಮುಂದಿನ ಆಸನಗಳಲ್ಲಿ ಅಥವಾ ಸೀಟ್‌ಬೆಲ್ಟ್ ಅಳವಡಿಸದೇ ಕುಳಿತುಕೊಳ್ಳಲು ಬಿಡಬೇಡಿರಿ.




## » ವಾಹನ ಹಾಗೂ ಪ್ರಯಾಣಿಕರ ಸುರಕ್ಷತೆ

ವಾಹನ ಮತ್ತು ಪ್ರಯಾಣಿಕರ ಸಂರಕ್ಷಣೆ ವಾಹನ ಚಾಲಕನ ಹೊಣೆ.

ಕಳ್ಳತನ ಪ್ರಕರಣಗಳು ಹೆಚ್ಚುತ್ತಿವೆ. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಈ ಹೆಚ್ಚಳ ಕಂಡುಬರುತ್ತಿದೆ.

ಕಾರ್ ಕಳ್ಳರು ಹೊಸ ಮತ್ತು ದುಬಾರಿ ವಾಹನಗಳ ಮೇಲೆ ಕಣ್ಣಿಟ್ಟಿರುತ್ತಾರೆ. ಅವರು ತಮ್ಮ ಕಾರ್ಯಾಚರಣೆಗಳಿಗೆ ಸುಲಭವಾದ ಮಾರ್ಗ ಹುಡುಕುತ್ತಾರೆ. ಅವರ ಗುರಿ ಎಂದರೆ ಕಡಿಮೆ ಭದ್ರವಾಗಿರುವ ವಾಹನಗಳು ಮತ್ತು ಶ್ರೀಮಂತ ಪ್ರಯಾಣಿಕರು. ಮನೆಯಲ್ಲಿ ಅಥವಾ ಕಚೇರಿಯಲ್ಲಿ ವಾಹನ ನಿಲ್ಲಿಸುವಾಗ ಅಥವಾ ಪ್ರಯಾಣಿಕರನ್ನು ಕೊಂಡೊಯ್ಯುವಾಗ ಅಥವಾ ವಾಹನ ಚಾಲನೆ ಮಾಡುವಾಗಲೂ ಹೆಚ್ಚಿನ ಎಚ್ಚರ ವಹಿಸಿ.




## ಚಾಲನೆ ಮಾಡುವಾಗ ಮತ್ತು ವಾಹನ ನಿಲ್ಲಿಸುವಾಗ ಮುನ್ನೆಚ್ಚರಿಕೆಗಳು

- ವಾಹನ ಸವಾರಿ ಮಾಡುವಾಗ ಯಾವಾಗಲೂ ಬಾಗಿಲನ್ನು ಒಳಗಿನಿಂದ ಬೀಗ ಹಾಕಿರಿ.
- ಭಿಕ್ಷುಕರಿಗೆ ಅಥವಾ ತಿರುಕರಿಗೆ ಏನನ್ನೂ ಕೊಡಲು ಹೋಗಬೇಡಿ. ಒಬ್ಬ ನಿಮ್ಮ ಗಮನ ಬೇರೆ ಕಡೆ ಸೆಳೆಯುತ್ತಾನೆ ಮತ್ತು ಇನ್ನೊಬ್ಬ ನಿಮ್ಮ ಬೆಲೆಬಾಳುವ ವಸ್ತುಗಳನ್ನು ಎಗರಿಸಿಬಿಡುತ್ತಾನೆ.
- ಪ್ರಯಾಣ ಮಾಡುವಾಗ ನೀವು ಹೋಗುವ ಮಾರ್ಗವನ್ನು ಪೂರ್ತಿಯಾಗಿ ತಿಳಿದುಕೊಂಡಿರಿ.
- ಸಮಯ ನಿರ್ವಹಣೆಯ ದೃಷ್ಟಿಯಿಂದ ನಿಮ್ಮ ಪ್ರಯಾಣದ ಯೋಜನೆ ರೂಪಿಸಿಕೊಳ್ಳಿ.
- ರಾತ್ರಿವೇಳೆ, ಕೇವಲ ಚೆನ್ನಾಗಿ ಗೊತ್ತಿರುವ ಒಳ್ಳೆಯ ಬೆಳಕು ಇರುವ ಸ್ಥಳಗಳನ್ನೇ ಆಯ್ಕೆ ಮಾಡಿಕೊಳ್ಳಿ.
- ಗೊತ್ತಿಲ್ಲದೇ ಇರುವ ಜನರಿಗೆ ಯಾವಾಗಲೂ ಲಿಫ್ಟ್ ಕೊಡಲೇಬೇಡಿ.
- ಸುರಕ್ಷಿತವಾದ ಹಾಗೂ ಅಧಿಕೃತವಾದ ಜಾಗಗಳಲ್ಲೇ ಗಾಡಿಯನ್ನು ನಿಲ್ಲಿಸಿರಿ.
- ಗೊತ್ತಿಲ್ಲದೇ ಇರುವ ಜಾಗಗಳಲ್ಲಿ ಪ್ರಮಾಣೀಕೃತ ಮಾರ್ಗದರ್ಶಕರಿಂದ ಸರಿಯಾದ ಮಾರ್ಗದರ್ಶನ ಪಡೆಯಿರಿ.
- ಪೊಲೀಸರು, ಆಂಬ್ಯುಲೆನ್ಸ್ ಮತ್ತು ಅಗ್ನಿಶಾಮಕ ಕೇಂದ್ರದ ದೂರವಾಣಿ ಸಂಖ್ಯೆಯನ್ನು ಇಟ್ಟುಕೊಂಡಿರಿ.

**ಎಲ್ಲ ಕಿಟಕಿಗಳನ್ನು ಮುಚ್ಚಲು ಮತ್ತು ಸುರಕ್ಷಾ ಬೀಗಗಳನ್ನು ಹಾಕಲು ಹಾಗೂ ಕೀಲಿಕೈಗಳನ್ನು ನಿಮ್ಮ ಬಳಿ ಇಟ್ಟುಕೊಳ್ಳಲು ಮರೆಯಬೇಡಿ!**